# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 584/2023**
**ಸಿಡಬ್ಲ್ಯು ಃ 1**
**ಪಿಡಬ್ಲ್ಯು ಃ 1**

**ಹೆಸರು ಃ** ಕೆಂಪಯ್ಯ ಈಶ್ವರಯ್ಯ ಗಣಾಚಾರಿ
ವಯಸ್ಸು ಃ **60** ವರ್ಷ
**ಉದ್ಯೋಗ** ಃ ನಿವೃತ್ತ ಎ ಎಸ್ ಐ
**ವಾಸ** ಃ ಹೆಬ್ಬಾಳ ತಾಃ ಹುಕ್ಕೇರಿ

**(ದಿನಾಂಕಃ 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ ಸಸಅಃರವರಿಂದಃ**

**1.** ನಾನು **02-06-2019** ರಿಂದ ಮೆ-**2025**ರ ವರೆಗೆ ನಾನು ಎ ಎಸ್ ಐ ಆಗಿ ಹುಕ್ಕೇರಿ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ **27-11-2022** ರಂದು ನಾನು ಠಾಣೆಯಲ್ಲಿದ್ದಾಗ **17-30** ಗಂಟೆಗೆ ಮದಮಕ್ಕನಾಳ ಗ್ರಾಮದ ಬಸ್ ನಿಲ್ದಾಣದಲ್ಲಿ ಈರಣ್ಣಾ ಬಸವಾಜ ಕುಂಡಿ ಇವರು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿದ್ದು ಕೂಡಲೇ ನಾನು ನಮ್ಮ ಸಿಬ್ಬಂದಿಯಾದ ಚಾಸಾ-**4** ಮತ್ತು **5** ಇವರನ್ನು ಕರೆಸಿಕೊಂಡು ಅವರಿಗೆ ರೇಡ ಮಾಡುವ ಸಂಗತಿ ತಿಳಿಸಿ, ಚಾಸಾ-**4** ಇವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ಅವರು ಪಂಚರನ್ನು ಕರೆದುಕೊಂಡು ಬಂದರು. ನಂತರ ಪಂಚರಿಗೂ ಸಹ ವಿಚಾರ ತಿಳಿಸಿ ಅವರು ಒಪ್ಪಿ ಕೊಂಡ ಮೇರೆಗೆ ನಾವೆಲ್ಲರೂ ಕೂಡಿ **17-50** ಗಂಟೆಗೆ ಒಂದು ಖಾಸಗಿ ವಾಹನದಲ್ಲಿ ಮದಮಕ್ಕನಾಳ ಗಾಮಕ್ಕೆ ಹೋಗಿ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ವಾಚ್ ಮಾಡುತ್ತಿರುವಾಗ ಅಲ್ಲಿ ಒಬ್ಬ ವ್ಯಕ್ತಿ ಒಂದು ಕೈಚೀಲದಲ್ಲಿ ಮದ್ದ ಪ್ಯಾಕೆಟು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ.

**3.** ಆತ ಅನಧೀಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಖಾತ್ರಿ ಮಾಡಿಕೊಂಡು ಅವನನ್ನು ನಾವು ರೇಡ ಮಾಡಿ ಹಿಡಿದುಕೊಂಡೆವು. ಆಗ ಸಮಯ **18-10** ಗಂಟೆ ಆಗಿತ್ತು . ನಂತರ ಆತನ ಹೆಸರು ವಿಚಾರಿಸಲಾಗಿ ಆತ ತನ್ನ ಹೆಸರು ಈರಣ್ಣ ಬಸವರಾಜ @ ರಾಜು ಕುಂಡಿ ಸಾಃ ಮದಮ್ಮಕ್ಕನಾಳ ಎಂದು ಹೇಳಿದ. ಪಂಚರ ಸಮಕ್ಷಮದಲ್ಲಿ ಆತನ ಕೈಚೀಲದಲ್ಲಿ ಏನಿದೆ ಎಂದು ವಿಚಾರಿಸಲಾಗಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟುಗಳು ಇರುವುದಾಗಿ ತಿಳಿಸಿದ. ಅವುಗಳನ್ನು ತನ್ನ ತಾಬಾ ಇಟ್ಟುಕೊಳ್ಳಲು ಮತ್ತು ಮಾರಾಟ ಮಾಡಲು ಅನುಮತಿ ಬಗ್ಗೆ ವಿಚಾರಿಸಿದಾಗ ಇಲ್ಲ ಎಂದು ತಿಳಿಸಿದ. ಪಂಚರ ಸಮಕ್ಷಮ ಆತನ ಬಳಿ ಇದ್ದ ಕೈಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಹೈವರ್ಡ್ಸ ವಿಸ್ಕಿಯ **90** ಎಮ್ ಎಲ ನ **38** ಟೆಟ್ರಾ ಪ್ಯಾಕೇಟುಗಳು ಇದ್ದವು. ಆತನ ಅಂಗ

ಶೋಧನೆ ಮಾಡಿದಾಗ ಮದ್ಯ ಮಾರಾಟದಿಂದ ಬಂದಂತಹ ರೂ. 150-00 ಹಣ ಇತ್ತು. ಸ್ಯಾಂಪಲಗಾಗಿ 2 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟುಗಳನ್ನು ತೆಗೆದಿರಿಸಿದೆವು. ಪಂಚನಾಮೆ ಜರುಗಿಸಿ ಪಂಚರ ಸಹಿ ಇದ್ದ ಚೀಟಿ ಅಂಟಿಸಿ ಅರಗಿನಿಂದ ಶೀಲು ಮಾಡಲಾಯಿತು. ಸದ್ರಿ ಸ್ಥಳದಲ್ಲಿ ಸಾಯಂಕಾಲ 6-10 ರಿಂದ 7-10 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆ ಬರೆದು ಸಹಿ ಪಡೆದುಕೊಂಡೆವು. ನಂತರ ಸಿಕ್ಕ ಮಾಲು ಮತ್ತು ಪಂಚನಾಮೆ ಮತ್ತು ಆರೋಪಿಯೊಂದಿಗೆ ಠಾಣೆಗೆ ಬಂದು ನಾನು ಸ್ವದೂರನ್ನು ಸರಕಾರದ ಪರವಾಗಿ ಸಲ್ಲಿಸಿರುತ್ತೇನೆ.

4. ನಾನು ಕೊಟ್ಟ ದೂರನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಅಂದು ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

5. ಆ ದಿನ ವಿಸ್ಕಿ ಟೆಟ್ರಾ ಪ್ಯಾಕೆಟುಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಕೈಚೀಲ ಮತ್ತು ಮದ್ಯದ ಪ್ಯಾಕೆಟ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ರಿಂದ 3 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೊಪಿ ಪರ ಶ್ರೀ ಜಿ ಎಂ ವಾಂದ್ರೆ ವಕೀಲರಿಂದ -**

6. ಠಾಣೆ ಬಿಡುವ ಮುಂಚೆ ನಾನು ಎಫ್ ಐ ಆರ್ ನ್ನು ದಾಖಲಿಸಿರುವುದಿಲ್ಲ, ಎಫ್ ಐ ಆರ್ ದಾಖಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿಯು ಯಾವ ಮದ್ಯದ ಅಂಗಡಿಯಿಂದ ಮದ್ಯದ ಪ್ಯಾಕೆಟಗಳನ್ನು ತೆಗೆದುಕೊಂಡು ಬಂದಿದ್ದ ಎಂದು ನಾನು ವಿಚಾರಣೆ ಮಾಡಿಲ್ಲ ಹುಕ್ಕೇರಿ ಠಾಣೆಯಿಂದ ಮದಮಕ್ಕನಾಳ ಗ್ರಾಮ 25 ಕಿ.ಮೀ ದೂರದಲ್ಲಿದೆ ಎಂದರೆ ಸರಿಯಲ್ಲ, 5 ಕಿ.ಮೀ ದೂರದಲ್ಲಿದೆ. ಅಡವಿಸಿದ್ದೇಶ್ವರ ಮಠದ ಮೂಲಕ ಮದಮಕ್ಕನಾಳಗೆ ಹೋದೆವು. ಚಾಸಾ-4 ಮತ್ತು 5 ಇವರು ಪಧ್ಯಾಹ್ನದ ಡ್ಯೂಟಿಯಲ್ಲಿದ್ದರು. ನಾವು ರೇಡಗೆ ಖಾಸಗಿ ವಾಹನದಲ್ಲಿ ಹೋದೆವು. ಅದರಲ್ಲಿ ನಾವು 5 ಜನ ಹೋದೆವು. ನಮ್ಮ ಠಣಾ ವಾಹನವನ್ನು ಪಿ ಐ ಒಯ್ದಿದ್ದರು ಆದ್ದರಿದ ಖಾಸಗಿ ವಾಹನದಲ್ಲಿ ನಾವು ಆ ದಿನ ಹೋದೆವು. ಖಾಸಗಿ ವಾಹನ ಒಯ್ಯಲು ಮೇಲಾಧಿಕಾರಿಗಳ ಪೂರ್ವ ಅನುಮತಿ ಬೇಕು ಎಂದರೆ ಸರಿಯಲ್ಲ. ನಾವು ನಂತರ ಮೇಲಾಧಿಕಾರಿಗಳಿಗೆ ತಿಳಿಸಬಹುದು ಎಂದು ಹೇಳುತ್ತಾರೆ . ನಾನು , ಚಾಸಾ-4, 5 ಮತ್ತು ಪಂಚರಾದ ಚಾಸಾ-2 ಮತ್ತು 3 ಹೋದೆವು. ನಾವು ಪಂಚರಿಗೆ ನೋಟಿಸು ಕೊಟ್ಟಿದ್ದೆವು. ಚಾಸಾ-4 ರವರು ಪಂಚರಿಗೆ ನೋಟಿಸನ್ನು ತಲುಪಿಸಿದರು. ಪಂಚರು ಸ್ಟೇಶನ ಹತ್ತಿರವೇ ಆ ದಿನ ಬಂದಿದ್ದರು. ನಾವು ನಮ್ಮ ವಾಹನವನ್ನು ಘಟನಾ ಸ್ಥಳದಿಂದ ಉತ್ತರ ದಿಕ್ಕಿಗೆ 200 ಅಡಿ ದೂರದಲ್ಲಿ ನಿಲ್ಲಿಸಿದ್ದೆವು. ಎಲ್ಲರೂ ಸೇರಿ ವಾಹನದ ಹತ್ತಿರವೇ ನಿಂತು 5 ನಿಮಿಷ ವಾಚ್ ಮಾಡಿದೆವು.

5 ನಿಮಿಷದಲ್ಲಿ ಇಬ್ಬರು ವ್ಯಕ್ತಿಗಳು ಬಂದು ಸಾರಾಯಿ ತೆಗೆದುಕೊಂಡು ಹೋದರು. ನಾವು ರೇಡ ಮಾಡಿದಾಗ ಆರೊಪಿ ಓಡಿ ಹೋಗಲು ಪ್ರಯತ್ನ ಮಾಡಲಿಲ್ಲ , ಆತ ಅಲ್ಲೇ ನಿಂತಿದ್ದ. ಖರೀದಿ ಮಾಡಲು ಬಂದವರು ಓಡಿ ಹೋದರು. ನಾನೇ ಆ ವ್ಯಕ್ತಿಯನ್ನು ಹಿಡಿದು ಅಂಗ ಶೋಧನೆ ಮಾಡಿದೆ. ನಾನು ರೇಡಗೆ ಸಮವಸ್ತ್ರದಲ್ಲೇ ಹೋಗಿದ್ದೆವು. ಆ ವ್ಯಕ್ತಿ ಕೆಂಪು ಬಣ್ಣದ ಕೈಚೀಲದಲ್ಲಿ ವಿಸ್ಕಿ ಇಟ್ಟುಕೊಂಡಿದ್ದ.

7. ಸ್ಯಾಂಪಲಗೆ ತೆಗೆದ ಟೆಟ್ರಾ ಪ್ಯಾಕೆಟನ ಸೀರಿಯಲ ನಂಬರ ಹೇಳಲು ಬರುವುದಿಲ್ಲ. ಸದರಿ ಮದ್ಯ ಯಾವ ಅಂಗಡಿಯಿಂದ ಸರಬರಾಜು ಆಯಿತು ಎಂದು ನಾನು ಪತ್ತೆ ಮಾಡಿಲ್ಲ. ನಾವು ಆ ಸಮಯದಲ್ಲಿ ನಮ್ಮ ಮೊಬೈಲನಿಂದ ಫೋಟೊ ತೆಗೆಯುವ ಪ್ರಯತ್ನ ಮಾಡಿಲ್ಲ, ಆ ರೀತಿ ಫೋಟೊ ತೆಗೆಯಲು ನಮಗೆ ತೊಂದರೆ ಇತ್ತು. ಆರೋಪಿಯು ಓಡಿ ಹೋಗುತ್ತಿದ್ದರಿಂದ ಆತನನ್ನು ಹಿಡಿಯುವ ಪ್ರಯತ್ನದಲ್ಲಿ ಫೋಟೊ ತೆಗೆದಿಲ್ಲ. ಆರೋಪಿಯು ಬಸ್ ನಿಲ್ದಾಣದ ಸಮೀಪ ಮಗದುಮ ಎಂಬುವವರ ಜಮೀನಿನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಮಾರಾಟ ಮಾಡುತ್ತಿದ್ದನು. ಬಸ್ ನಿಲ್ದಾಣ ಇರುವುದರಿಂದ ಸಾರ್ವಜನಿಕರು ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಓಡಾಡುತ್ತಿದ್ದರು ಎಂದರೆ ನಿಜ. ನಾವು ರೇಡ ಮಾಡಿದೆವು ಎಂದು ಹೇಳಲಾದ ಸಮಯದಲ್ಲಿ ಕೋವಿಡನ ಎರಡನೇ ವೆವ್ ಇತ್ತು ಎಂದರೆ ನಿಜ. ಕೋವಿಡ್ ಇರುವುದರಿಂದ ಮದ್ಯದ ಎಲ್ಲಾ ಅಂಗಡಿಗಳು ಬಂದ ಇದ್ದವು. ಖಾಸಗಿ ವಾಹನದಲ್ಲಿ ಹೋದ ಬಗ್ಗೆ ನಾವು ಬಿಲ್ ಪಡೆದು ಮೇಲಾಧಿಕಾರಿಗಳಿಂದ ಹಣ ಪಡೆದುಕೊಂಡಿರುವುದಿಲ್ಲ. ನಮ್ಮ ಮೇಲಾಧಿಕಾರಿಗಳು ಪ್ರತಿ ತಿಂಗಳು ಸಭೆ ಕರೆಯುತ್ತಾರೆ ಎಂದರೆ ನಿಜ. ಸಭೆಯಲ್ಲಿ ಇಂತಿಷ್ಟು ಪ್ರಕರಣಗಳನ್ನು ಹಾಕಬೇಕೆಂದು ನಿರ್ದೇಶನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಆ ರೀತಿ ನಿರ್ದೇಶನ ಇದ್ದು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾವು ನಮ್ಮ ಮೇಲಾಧಿಕಾರಿಯ ಮಾತು ಕೇಳಿ, ಆತನ ಮೇಲೆ ಒಂದು ಸುಳ್ಳು ಕೇಸು ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಗ್ರಾಮಕ್ಕೆ ಹೋಗಿದ್ದೆವು ಎಂದು ತೋರಿಸಲು ಫೋಟೊ ಮತ್ತು ಸ್ಕೇಚನ್ನು ಹಾಜರ ಮಾಡಿರುವುದಿಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**